## ಬಯಲಾಟದ ಹುಡುಗಿ



ಈಚೆಗೆ ಪರಿಚಿತ ಕುಟುಂಬದ ಮಹಿಳೆಯೊಬ್ಬರು ನಮ್ಮ ಮನೆಗೆ ಬಂದಿದ್ದರು. ಅವರು ವಧು–ವರರನ್ನು ಪರಿಚಯಿಸುವ ಕೆಲಸವನ್ನೂ ಮಾಡುತ್ತಿದ್ದರು. ಅದೇ ವಿಚಾರವಾಗಿ ಮಾತನಾಡುತ್ತಾ ತುಂಬಾ ಸಮಯ ಕಳೆದು ಹೋದರು. ತಮ್ಮೂರು ತಲುಪಿದ ನಂತರ ನನಗೆ ಫೋನ್ ಮಾಡಿದ ಅವರು, 'ತಮ್ಮಾ, ನಿನ್ನ ಫೋನಿಗೆ ಹುಡುಗಿ ಬಯಲಾಟ ಫೋಟೊ ಹಾಕಿನಿ, ನೋಡಪಾ…' ಎಂದರು. ತಕ್ಷಣಕ್ಕೆ ನನಗೆ ಏನೂ ಹೊಳೆಯಲೇ ಇಲ್ಲ. ಬಯಲಾಟದ ಹುಡುಗಿಯ ಫೋಟೊ ನನಗ್ಯಾಕೆ ಕಳಿಸಿದರೆಂದು ತಲೆಕೆಡಿಸಿಕೊಂಡೆ. ನಂತರ ವಾಟ್ಸ್‌ಆ್ಯಪ್ ನೋಡಿದಾಗ ತಿಳಿಯಿತು. ಅವರು ಹುಡುಗಿಯೊಬ್ಬಳ ಫೋಟೊ ಮತ್ತು ಬಯೋಡಟಾ ಕಳಿಸಿದ್ದರು! ಬಯೋಡಟಾ ಅವರ ಹಳ್ಳೀ ಮಾತಲ್ಲಿ ಬಯಲಾಟವಾಗಿತ್ತು!

**ಮಹೇಶ್ವರ ಹುರುಕಡ್ಲಿ**

---

## ರಜೆಯ ಕಾರಣ…



ನನ್ನ ಗೆಳೆಯನೊಬ್ಬನ ಮೇಲಧಿಕಾರಿ ತುಂಬಾ ಶಿಸ್ತಿನ ಆಸಾಮಿ. ಯಾರಿಗೂ ರಜೆ ಕೊಡುತ್ತಲೇ ಇರಲಿಲ್ಲ. 'ತಂದೆಯನ್ನು ಆಸ್ಪತ್ರೆಗೆ ಸೇರಿಸಿದ್ದಾರೆ. ಊರಿಗೆ ಹೋಗಬೇಕು. ರಜೆ ಕೊಡಿ' ಎಂದರೆ, 'ನನ್ನ ತಂದೆಗೂ ಹುಷಾರಿಲ್ಲ, ಆದರೂ ನಾನು ಹೋಗಲಿಲ್ಲ' ಅನ್ನುತ್ತಿದ್ದ. 'ತಂಗಿಯ ಮದುವೆಗೆ ಹೋಗಬೇಕು' ಅಂದರೆ, 'ಹೋದ ವಾರ ನನ್ನ ತಂಗಿಯ ಮದುವೆ ಆಯ್ತು, ನಾನು ಹೋಗಲೇ ಇಲ್ಲ. ಕೆಲಸ ಮುಖ್ಯ ಅಲ್ಲವಾ?' ಅನ್ನುತ್ತಿದ್ದ. ಇದನ್ನು ತಿಳಿದ ಸಹೋದ್ಯೋಗಿಯೊಬ್ಬ ರಜೆ ಮಂಜೂರು ಮಾಡಿಸಿಕೊಂಡು ಶಿಳ್ಳೆ ಹಾಕುತ್ತಾ ಹೊರ ಬಂದಾಗ ಎಲ್ಲರಿಗೂ ಆಶ್ಚರ್ಯ. ಅವನು ರಜೆಗೆ ಕೊಟ್ಟ ಕಾರಣ ಕೇಳಿ ಎಲ್ಲರೂ ದಂಗು… 'ನಮ್ಮ ಅಮ್ಮ ಕೂಡಲೇ ಊರಿಗೆ ಬರಲು ಹೇಳಿದ್ದಾಳೆ ಸರ್, ನನ್ನ ತಂಗಿ ಯಾರೊಂದಿಗೋ ಓಡಿ ಹೋಗಿದ್ದಾಳಂತೆ… ಹೋಗಿ ಹುಡುಕಬೇಕು… ರಜೆ ಕೊಡಿ…'

**ಹಾಡ್ಯ ಬ. ಜಯಾನಂದ**